## 2. 12 ತಿಂಗಳ ವಸತಿಯುತ ಸೇತುಬಂಧ

### ( 12 Months Residential Bridge Course)

**(ವಿ.ಸೂ : 12 ತಿಂಗಳ ವಸತಿಯುತ ಸೇತಬಂಧ ಕಾರ್ಯಕ್ರಮ 06 ತಿಂಗಳ ವಸತಿಯುತ ಸೇತುಬಂಧ ಕಾರ್ಯಕ್ರಮದ ಸ್ಥಾನದಲ್ಲಿ 07-08 ನೇ ಸಾಲಿನಿಂದ ಜಾರಿಗೆ ಬಂದಿದೆ)**

ಶಾಲೆಯಿಂದ ಹೊರಗುಳಿದಿರುವ ಶಾಲೆಗೆ ದಾಖಲಾಗಿ ಶಾಲೆ ಬಿಟ್ಟ ಅಥವಾ ಶಾಲೆಗೆ ದಾಖಲಾಗಿಲ್ಲದ ಮಕ್ಕಳನ್ನು ವಿವಿಧ ಕಾರ್ಯತಂತ್ರಗಳ ಅಡಿಗಳಲ್ಲಿ ಶಾಲಾವಾಹಿನಿಗೆ ತರಬಹುದಾಗಿದೆ. ನಾವು ಈಗಾಗಲೇ ಸಮಾಜದ ಕೊನೆಯ ಸ್ತರದ, ಆಶ್ರಯ ರಹಿತ ಅಥವಾ ಬಡತನದ ಕಾರಣದಿಂದ ಶಾಲೆಯಿಂದ ಹೊರಗುಳಿದ / ಹೊರಗುಳಿಯಬಹುದಾದ ಮಗುವನ್ನು ಆಶಾಕಿರಣ ಯೋಜನೆಯಡಿ ಹೇಗೆ ಶಾಲೆಗೆ ತರಬಹುದು / ಶಿಕ್ಷಣ ಮುಂದುವರೆಸಬಹುದು ಎಂಬುದನ್ನು ಚರ್ಚಿಸಿದ್ದೇವೆ ಹಾಗೂ ಶಾಲೆಯಿಂದ ಹೊರಗುಳಿದಿದ್ದು ಶಾಲಾ ಪಠ್ಯವಸ್ತುಗಳ ಕಲಿಕೆಗೆ ಕಂದರ (Learning Gap) ಏರ್ಪಟಿದ್ದು ಮಗು ಶಾಲೆಗೆ ಹೋಗಲು ಹಿಂಜರಿಯುತ್ತಿದ್ದಲ್ಲಿ ಅಥವಾ ಮಗು ಬಿಟ್ಟಿದ್ದ ತರಗತಿಗೆ ಅಥವಾ ವಯೋಮಾನಕ್ಕೆ ಅನುಗುಣವಾಗಿ ಸಾಮರ್ಥ್ಯಗಳಿಕೆಯಲ್ಲಿ ಹಿಂದುಳಿದಿದ್ದರೆ ಚಿಣ್ಣರ ಅಂಗಳ ಸೇತುಬಂಧ ಮೂಲಕ ಮಗು ಮುಂದಿನ ಸಾಮರ್ಥ್ಯಗಳನ್ನು ಕಲಿಯಲು ಅವನ/ಳ ಮನಸ್ಸನ್ನು ಸಿದ್ಧಗೊಳಿಸಲಾಗುತ್ತದೆ. ಆದರೆ ಚಿಣ್ಣರ ಅಂಗಳ ಮೂಲಕ 2 ತಿಂಗಳ ಸೇತುಬಂಧ ಶಿಕ್ಷಣ ನೀಡಿದರೂ ಆತ ತರಗತಿಯ ಇತರ ಮಕ್ಕಳಂತೆ ಸಾಮರ್ಥ್ಯಗಳನ್ನು ಗಳಿಸಲು ವಿಫಲವಾದಲ್ಲಿ ಮಗುವನ್ನು ಏನು ಮಾಡಬೇಕು ? ಎನ್ನುವ ಪ್ರಶ್ನೆಗೆ ಉತ್ತರವೇ 6 ಅಥವ 12 ತಿಂಗಳು ವಸತಿಯುತ ಸೇತುಬಂಧ. ಕೆಲವು ಮಕ್ಕಳಿಗೆ ಅಗತ್ಯ ಕಲಿಕೆಯನ್ನು ಪೂರೈಸಲು ಸಾಲದು ಎಂಬ ಕಾರಣಕ್ಕೆ 2007-08 ರಿಂದ ಈ ಸೇತುಬಂಧ ಕೇಂದ್ರಗಳನ್ನು 12 ತಿಂಗಳ ಅವಧಿಗೆ ವಿಸ್ತರಿಸಲಾಗಿದೆ.

ಶಾಲೆಯಿಂದ ಹೊರಗೆ ಉಳಿದ ಮಗು ಶಾಲೆಗೆ ಸೇರಿದರೆ ಕಲಿತ ಮಕ್ಕಳೊಂದಿಗೆ ವ್ಯವಹರಿಸಲು ಅಥವಾ ಅವರ ಸಮನಾಗಿ ಕಲಿಯಲು ಹೇಗೆ ಸಾಧ್ಯ ? ಆದ್ದರಿಂದ ಇಂತಹ ಮಕ್ಕಳಿಗೆ 2 ತಿಂಗಳ ಬ್ರಿಡ್ಜ್‌ಕೋರ್ಸನ್ನು ನೀಡಿದಾಗ ಕೆಲವು ಮಕ್ಕಳು ತಾವು ಸೇರಿಬಿಟ್ಟ ತರಗತಿಗೆ ಅಥವಾ ಮುಂದಿನ ತರಗತಿಗೆ ಸೇರಲು ಸಾಮರ್ಥ್ಯಗಳನ್ನು ಕಲಿಯಲು ಸನ್ನದ್ಧರಾಗುತ್ತಾರೆ. ಆದರೆ ಕೆಲವು ಮಕ್ಕಳಿಗೆ 2 ತಿಂಗಳ ಬ್ರಿಡ್ಜ್‌ಕೋರ್ಸ್ ಸಾಲದಾಗುತ್ತದೆ. ಅಂತಹ ಮಕ್ಕಳಿಗೆ ಪುನಃ 12 ತಿಂಗಳವರೆಗೆ ಬಿಡ್ಜ್‌ಕೋರ್ಸ್ (ಸೇತುಬಂಧ) ನೀಡಿದರೆ ಮಗು ತಾನು ಗಳಿಸಿರುವ ಸಾಮರ್ಥ್ಯಗಳನ್ನು ಪುನಃಸ್ಮರಿಸಿ ಮುಂದಿನ ಸಾಮರ್ಥ್ಯಗಳನ್ನು ಗಳಿಸಲು, ಮಗುವಿನ ಮನೋಭೂಮಿಕೆಯನ್ನು ಸಿದ್ಧಗೊಳಿಸಲು ಸಾಧ್ಯವಾಗುತ್ತದೆ. ಅಥವಾ ಶಾಲೆಗೆ ಸೇರಿಲ್ಲದ ಮಗುವನ್ನು ನೇರವಾಗಿ 1ನೇ ತರಗತಿಗೆ ಸೇರಿಸಬಹುದು. ತನಗಿಂತ ಆಗ ಕಡಿಮೆ ವಯೋಮಾನದ ಮಕ್ಕಳೊಂದಿಗೆ ಬೆರೆಯಲು ಆ ಮಗು ಹಿಂಜರಿಯುತ್ತದೆ ಅಥವಾ ಈ ಮಗುವಿನ ವಯಸ್ಸು ಹೆಚ್ಚಾಗಿದ್ದು ದೈಹಿಕವಾಗಿ ಬೆಳೆದಿರುವುದರಿಂದ ತನಗಿಂತ ಕಡಿಮೆ ವಯೋಮಾನದ ಆ ತರಗತಿ ಮಕ್ಕಳಿಗೆ ತೊಂದರೆ ಕೊಡಬಹುದು. ಇಂತಹ ವೇಳೆ ಆ ಮಗುವಿಗೆ 12 ತಿಂಗಳ ಕಾಲ ಸೇತುಬಂಧ ಶಿಕ್ಷಣ ಅರ್ಹ ತರಗತಿಗೆ ಸೇರಿಸುವುದರಿಂದ ಇಂತಹ ಸಂದಿಗ್ಧತೆಯಿಂದ ಪಾರಾಗಬಹುದು. ಈ ಹಿನ್ನೆಲೆಯಲ್ಲಿ 12 ತಿಂಗಳ ವಸತಿ ರಹಿತ ಸೇತುಬಂಧ ಕೇಂದ್ರಗಳನ್ನು ತೆರೆಯಲಾಗಿದೆ.

**ಉದ್ದೇಶ :-**

- ಶಾಲೆ ಬಿಟ್ಟದ್ದೇನೆ, ಗಳಿಸಬೇಕಾದ ಸಾಮರ್ಥ್ಯ ಗಳಿಸಿಲ್ಲ. ಈಗ ಶಾಲೆಗೆ ಹೋದರೆ ಬೇರೆ ಮಕ್ಕಳಂತೆ ಕಲಿಯಲು ಸಾಧ್ಯವಿಲ್ಲ. ಮುಂದಿನ ಕಲಿಕೆಗೆ ತೊಂದರೆ ಆಗಬಹುದು ಎನ್ನುವ ಮಕ್ಕಳ ಹಿಂಜರಿಕೆ ಹೋಗಲಾಡಿಸುವುದು.
- ಶಾಲೆಗೆ ದಾಖಲಾಗಿಲ್ಲದ ಮಕ್ಕಳಿಗೆ ನೇರವಾಗಿ ತರಗತಿಗೆ ಸೇರಿಸುವ ಬದಲು ಮಗುವಿನ ಮನಸ್ಸನ್ನು ಸಜ್ಜುಗೊಳಿಸಿ ತರಗತಿಗೆ ದಾಖಲಿಸುವುದು.
- ನಾನು ಸಹ ಇತರೆ ಮಕ್ಕಳಂತೆ ಕಲಿಯಬಲ್ಲೆ ಎನ್ನುವ ಆತ್ಮ ವಿಶ್ವಾಸ ಮೂಡಿಸುವುದು.
- ಮಕ್ಕಳಿಗೆ ಕಲಿಕೆಯಲ್ಲಿನ ಕೊರತೆ (Learning Gap) ಯನ್ನು ತುಂಬುವುದು
- ಶಾಲೆಗೆ ದಾಖಲಾಗಿಲ್ಲದ ಮಗುವಿಗೆ ಅಗತ್ಯ ಕಲಿಕೆಯ ಸಾಮರ್ಥ್ಯವನ್ನು ಕಲಿಸಿ ವಯೋಮಾನಕ್ಕನುಗುಣವಾಗಿ ತರಗತಿಗೆ ದಾಖಲಿಸುವುದು.

**ವ್ಯಾಪ್ತಿ :**

- ಶಾಲೆಬಿಟ್ಟ / ಶಾಲೆಗೆ ದಾಖಲಾಗಿಲ್ಲದ ಎಲ್ಲಾ ಮಕ್ಕಳಿಗೆ
- 2 ತಿಂಗಳ ಕಾಲ ಸೇತುಬಂಧ ನಡೆಸಿದರೂ ಅಗತ್ಯ ಕಲಿಕಾಂಶಗಳನ್ನು ಕಲಿಯಲು ಅಸಮರ್ಥರಾದ ಮಕ್ಕಳಿಗೆ
- ಬ್ರಿಡ್ಜ್ ಕೋರ್ಸ್ ನಂತರ ಮುಖ್ಯವಾಹಿನಿಗೆ ಬರುವ ಮಕ್ಕಳಿಗೆ
- 10–14 ವಯೋಮಾನದ ವಿವಿಧ ತರಗತಿಗಳಲ್ಲಿ ಶಾಲೆ ಬಿಟ್ಟ ಮಕ್ಕಳಿಗೆ. ಅವಶ್ಯಕತೆ ಇದ್ದಲ್ಲಿ 8–9 ರ ವಯೋಮಾನದ ಮಕ್ಕಳನ್ನು ಸೇರಿಸಬಹುದು
- ವಯಸ್ಸು ತುಂಬಿದ್ದರೂ ಶಾಲೆಗೆ ದಾಖಲಾಗಿಲ್ಲದೇ ಇದ್ದು, ಈಗ ಶಾಲೆಗೆ ಸೇರಿಸುತ್ತಿರುವ ಮಕ್ಕಳಿಗೆ
- ಒಂದು ಕೇಂದ್ರದಲ್ಲಿನ ಮಕ್ಕಳ ಕನಿಷ್ಠ ಸಂಖ್ಯೆ 50 ಕ್ಕಿಂತ ಕಡಿಮೆ ಮಕ್ಕಳಿದ್ದಾಗಲೂ ಕೇಂದ್ರ ನಡೆಸಬಹುದು. ಆದರೆ ಪ್ರತಿ ಮಗುವಿನ ಘಟಕ ವೆಚ್ಚ ಮೀರಬಾರದು.

**ಕಾರ್ಯತಂತ್ರವನ್ನು ಯಾರಿಗಾಗಿ ಪ್ರಾರಂಭಿಸಬಹುದು.**

- 2 ತಿಂಗಳ ಬ್ರಿಡ್ಜ್‌ಕೋರ್ಸ್ ಅನ್ನು ನೀಡಿದರೂ ವಯೋಮಾನಕ್ಕೆ ಅನುಗುಣವಾದ ಕಲಿಕೆಯ ಸಾಮರ್ಥಗಳನ್ನು ಗಳಿಸಲು ವಿಫಲವಾದ ಮಕ್ಕಳಿಗೆ.
- ದೀರ್ಘಾವಧಿಯ ಕಾಲ ಶಾಲೆಯಿಂದ ಹೊರಗುಳಿದಿರುವ ಮಕ್ಕಳಿಗಾಗಿ.
- ಶಾಲೆಗೆ ದಾಖಲಾಗದ ಮಗುವಿನ ವಯೋಮಾನಕ್ಕೆ ಅನುಗುಣವಾಗಿ, ಕಲಿಕೆಯ ಸಾಮರ್ಥ್ಯವನ್ನು ಗಳಿಸಬೇಕಾದ ಮಕ್ಕಳಿಗಾಗಿ.

**ಎಲ್ಲಿ ಪ್ರಾರಂಭಿಸಬೇಕು**

ಶಾಲೆಯಿಂದ ಹೊರಗೆ ಉಳಿದಿರುವ ಮಕ್ಕಳು ಎಲ್ಲಿ ನಿಬಿಡವಾಗಿ ದೊರೆಯುತ್ತಾರೋ ಮತ್ತು ಯಾವ ಶಾಲೆಗಳಲ್ಲಿ ಮಕ್ಕಳಿಗೆ ವಸತಿ ಸೌಲಭ್ಯ ಕಲ್ಪಿಸಲು ಅನುಕೂಲವಿದೆಯೋ ಅಂತಹ ಶಾಲೆಗಳಲ್ಲಿ ಈ ಕೇಂದ್ರಗಳನ್ನು ತೆರೆಯಬಹುದು.

**ಭೋಧಿಸಬೇಕಾದ ಪಠ್ಯವಸ್ತು**

- ಕಲಿಕಾಪೂರ್ವ ಚಟುವಟಿಕೆಗಳು
- ಚಿಣ್ಣರ ಅಂಗಳ ಪಠ್ಯವಸ್ತು
- ಚಿಣ್ಣರ ಅಂಗಳ (ಕಿರಿಯ / ಹಿರಿಯ) ಪುಸ್ತಕ
- ಮಗುವಿನ ಸಾಮರ್ಥ್ಯಕ್ಕೆ ಅನುಗುಣವಾಗಿ ಕಥೆ, ಹಾಡು, ಅಭಿನಯ, ಚಟುವಟಿಕೆಗಳ ಮೂಲಕ ಮಕ್ಕಳು ಕನಿಷ್ಠ ಕಲಿಕಾ ಪಡೆಯಲು ಅಗತ್ಯವಾದ ಸಾಹಿತ್ಯಗಳನ್ನು ಬಳಸಬಹುದು.
- ಮಗು ತಾನು ಸೇರಬೇಕಾಗಿರುವ ತರಗತಿಗಿಂತ ಕೆಳ ತರಗತಿಗಳ ಪಠ್ಯ ಪುಸ್ತಕಗಳು
- ಕಥೆ ಪುಸ್ತಕಗಳು
- ಮಗುವಿಗೆ ತರಗತಿ ಪಠ್ಯಪುಸ್ತಕಗಳನ್ನು ಹೆಚ್ಚು ಬಳಸಬಾರದು
- ಮೂಲ ಸಾಮರ್ಥ್ಯಗಳಿಗೆ ಒತ್ತು ಕೊಡಬೇಕು. (ಸಾಮಾನ್ಯ ಜ್ಞಾನ, ರಾಜ್ಯ, ಜಿಲ್ಲೆ, ವರ್ಷ, ತಿಂಗಳು, ಹಬ್ಬಹರಿದಿನ, ಮಹಾಪುರುಷರ ಪರಿಸರ ಕಾಳಜಿ, ಸ್ವಚ್ಛತೆ, ಇತ್ಯಾದಿ)
- ಶಿಕ್ಷಕರು ಸ್ವಯಂ ಸೇವಕರು ಕೆಳಗಿನ ಸಾಹಿತ್ಯಗಳನ್ನು ಅಭ್ಯಸಿಸಿ ಮಕ್ಕಳ ಸಾಮರ್ಥ್ಯವನ್ನು ಹೆಚ್ಚಿಸಲು ಶ್ರಮಿಸಬಹುದು.
  1. ಚಿಣ್ಣರ ಅಂಗಳ ಬೋಧಕರ ಕೈಪಿಡಿ
  2. ಚೈತನ್ಯ 1,2 ಕೈಪಿಡಿಗಳು

3. ಕೇಳಿ ಕಲಿ ಕೈಪಿಡಿ
4. ರಂಗಕಲೆ ಕೈಪಿಡಿಗಳು ಇತ್ಯಾದಿ
5. ತರಗತಿ ಪಠ್ಯ ಪುಸ್ತಕಗಳು

**ಬೋಧನಾ ಕಲಿಕಾ ಸಾಮಗ್ರಿಗಳು**

- ವಿವಿಧ ರೀತಿಯ ಮಿಂಚು ಪಟ್ಟಿಗಳು
- ಅಕ್ಷರದ / ಸಂಖ್ಯೆಗಳ ಚಾರ್ಟ್‌ಗಳು
- ಕಥೆಯ ಚಾರ್ಟ್‌ಗಳು
- ಸ್ಥಳೀಯವಾಗಿ ಸಿಗುವ ಸಾಮಗ್ರಿಗಳು (ಕಡ್ಡಿ, ಹುಣಸೆ ಬೀಜ, ಕಲ್ಲು ಇತ್ಯಾದಿ )
- ಕಥೆ ಪುಸ್ತಕ
- ವೃತ್ತ ಪತ್ರಿಕೆ
- ಚಿತ್ರಪಟಗಳು ಇತ್ಯಾದಿ
- ಅಧ್ಯಾಪಕರು ಮತ್ತು ಸ್ವಯಂಸೇವಕರು
- ಒಬ್ಬ ಆಧ್ಯಾಪಕರನ್ನು ತಪ್ಪದೇ ನಿಯೋಜಿಸುವುದು
- ಸ್ವಯಂ ಸೇವಕರು ಮತ್ತು ಅಡಿಗೆಯ ಸಹಾಯಕರನ್ನು ಹಿಂದಿನ ಅಧ್ಯಾಪನದಲ್ಲಿ ತಿಳಿಸಿರುವಂತೆ ತೆಗೆದುಕೊಳ್ಳಬೇಕು.

**ಹಣಕಾಸು**

| ಕ್ರ.ಸಂ. | (ಪ್ರತಿ ಮಗುವಿಗೆ 12 ತಿಂಗಳಿಗೆ ಲೆಕ್ಕಾಚಾರ ಮಾಡಿದೆ) 2006–07ರಲ್ಲಿ | | | 2009–10ರಲ್ಲಿ (ಪ್ರತಿ ಮಗುವಿಗೆ ವರ್ಷಕ್ಕೆ) |
|---|---|---|---|---|
| 1 | ಊಟಕ್ಕೆ | 5400/– | (ತಿಂಗಳಿಗೆ 450/– ರೂನಂತೆ) | 6,540 |
| 2. | ಸ್ವಯಂ ಸೇವಕರ ಗೌರವ ಸಂಭಾವನೆ | 360/– | (ತಿಂಗಳಿಗೆ 50/–ರಂತೆ ಗರಿಷ್ಠ 2500/l ತಿಂ) | 1,170 |
| 3. | ಸಹಾಯಕ ಗೌರವ ಸಂಭಾವನೆ | 240/– | (ತಿಂಗಳಿಗೆ 30/– ರೂ. ನಂತೆ) | 770 |
| 4. | ಬೆಡ್ಡಿಂಗ್ (ಚಾಪೆ, ದಿಂಬು, ಹೊದಿಕೆ, ಸೊಳ್ಳೆ ಪರದೆ) | 260/– | (ಒಮ್ಮೆ ಖರ್ಚು) | 300 |
| 5. | ದೈನಂದಿನ ಬಳಕೆ ವಸ್ತುಗಳು (ಮೈಸೋಪು, ಬಟ್ಟೆ ಸೋಪು, ಮಗ್, ಹಲ್ಲುಜ್ಜುವ ಬ್ರಶ್, ಪೇಸ್ಟ್, ಬಾಚಣಿಗೆ, ಹೇರ್ ಪಿನ್ ಇತ್ಯಾದಿ) | 340/– | | 400 |
| 6. | ಕೇಂದ್ರದ ಸಾದಿಲ್ವಾರು | | 20/– (ಒಮ್ಮೆ ಮಾತ್ರ) | 25 |
| 7. | ವೈದ್ಯಕೀಯ ಖರ್ಚು | | 60/– | 100 |
| 8. | ತುರ್ತು ನಿಧಿ | | 20/– | 25 |
| 9. | ಮಗುವಿನ ಲೇಖನ ಸಾಮಗ್ರಿ (ಸ್ಲೇಟ್, ನೋಟ್ | | | |
| 10. | ಪುಸ್ತಕ, ಪೆನ್ ರಬ್ಬರ್, ಪೆನ್ಸಿಲ್, ಕ್ರೆಯಾನ್ಸ್ ಇತ್ಯಾದಿ) | | 100/– (ಒಮ್ಮೆ ಮಾತ್ರ) | 170 |
| 11. | ಸೂಟ್‌ಕೇಸ್, ಟ್ರಂಕ್, | | 250 | **250** |
| 12. | ಒಂದು ಜೊತೆ ಬಟ್ಟೆ, ಟವಲ್ | | 250 | 250 |
| | ಒಟ್ಟು | | **6800/–** | **10,000/–** |

**ಸೂಚನೆ : ಕಡಿಮೆ ಬೀಳುವ ಬಾಬ್ತಿಗೆ ದಾನಿಗಳನ್ನು ಸಂಪರ್ಕಿಸಿ ಪೂರೈಸುವುದು.**

- ಮಗುವಿನ ದೈನಂದಿನ ವಸ್ತುಗಳು : ಮೈಸೋಪು, ಬಟ್ಟೆಸೋಪು, ಮಗ್, ಹಲ್ಲುಜ್ಜುವ ಬ್ರಶ್, ಬಟ್ಟೆ ತೊಳೆಯುವ ಬ್ರಶ್, ಬಾಚಣಿಗೆ, ಟೂತ್‌ಪೇಸ್ಟ್, ಬಿಂದಿ, ಹೇರ್‌ಪಿನ್, ಎಣ್ಣೆ, ಇತ್ಯಾದಿ
- ಕೇಂದ್ರದಲ್ಲಿ ಕಡ್ಡಾಯವಾಗಿ ಒಂದು ಕನ್ನಡಿ ಇರಬೇಕು.
- ಸ್ವಯಂ ಸೇವಕರ ಗೌರವ ಸಂಭಾವನೆ ತಿಂಗಳಿಗೆ ರೂ. 3,000/– ಮೀರಬಾರದು
- ಸಹಾಯಕರ ಗೌರವ ಸಂಭಾವನೆ ತಿಂಗಳಿಗೆ ರೂ. 2,000/– ಮೀರಬಾರದು
- ಕಳೆದ ವರ್ಷ ಟ್ರಂಕ್/ಬೆಡ್ಡಿಂಗ್ ನೀಡಿದ್ದರೆ ಈ ವರ್ಷ ನೀಡಬೇಡಿ.
- ಉಳಿದ ಅಂಶಗಳಿಗಾಗಿ ನೋಡಿ : ಅಧ್ಯಾಯ 5 – ಆಶಾಕಿರಣ.

* * * * *